# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರುರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು–೫೬೦೦೦೨.

ಸಂಖ್ಯೆ: ಬಿಬಿಎಂಪಿ/ಮುಆ/ಘನಿ(ಪಿಆರ್‌ಎಫ್)/G-943/22 F-1294/2022-23 ದಿನಾಂಕ:10.06.2022

## :: ಸುತ್ತೋಲೆ ::

ವಿಷಯ: ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ವಿಷಯಗಳಿಗೆ ಸಂಬಂಧಿಸಿದಂತೆ ವಲಯ ಆಯುಕ್ತರುರವರುಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸುವ ಕುರಿತು.

ಉಲ್ಲೇಖ:
1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ–2020.
2. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬಿ12/ಪಿಆರ್/184/2020–21, ದಿನಾಂಕ: 01.03.2021.
3. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಮು.ಆ.ಆ.ಶಾ/ಪಿಆರ್/ಜಿ–2442/2021–22, ದಿನಾಂಕ: 09.09.2021.
4. ವಿಶೇಷ ಆಯುಕ್ತರು(ಘನಿ) ಮತ್ತು ಜಂಟಿ ಆಯುಕ್ತರು(ಘನಿ)ರವರ ಅಧ್ಯಕ್ಷತೆಯಲ್ಲಿ ದಿನಾಂಕ:10.06.2022ರಂದು ನಡೆದ ಘನತ್ಯಾಜ್ಯ ನಿರ್ವಹಣಾ ಕೋಶದ ಸಭೆಯಲ್ಲಿನ ನಿರ್ದೇಶನಗಳು.

************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಘನ ಸರ್ಕಾರವು ಪಾಲಿಕೆಯ ಕಾರ್ಯ ಚಟುವಟಿಕೆಗಳನ್ನು ಹಾಗೂ ಜವಾಬ್ದಾರಿಗಳನ್ನು ಸುಲಲಿತವಾಗಿ ನಿರ್ವಹಿಸಲು ಪಾಲಿಕೆಯ ಅಧಿಕಾರವನ್ನು ವಿಕೇಂದ್ರಿಕರಣಗೊಳಿಸಿ ಉಲ್ಲೇಖ(01)ರಂತೆ ಕಾಯ್ದೆಯನ್ನು ಜಾರಿಗೆ ತಂದಿರುತ್ತದೆ. ಅದಲ್ಲದೇ, ಮಾನ್ಯ ಮುಖ್ಯ ಆಯುಕ್ತರು ಸಹ ಉಲ್ಲೇಖ(01 & 02)ರಂತೆ ವಲಯ ಕಛೇರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿರುತ್ತಾರೆ.

ಆದಾಗ್ಯೂ ಸಹ, ಪಾಲಿಕೆಯ ವ್ಯಾಪ್ತಿಯಲ್ಲಿ ವೈಜ್ಞಾನಿಕವಾಗಿ ಘನತ್ಯಾಜ್ಯ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಯ ಜವಾಬ್ದಾರಿಯನ್ನು ನಿರ್ವಹಿಸುತ್ತೀರುವ ಘನತ್ಯಾಜ್ಯ ನಿರ್ವಹಣಾ ಕೋಶಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಕಡತಗಳು ನಿರ್ಣಯಕ್ಕಾಗಿ/ಬಿಲ್‌ಗಳ ಪಾವತಿಗಾಗಿ ಕೇಂದ್ರ ಕಛೇರಿಗೆ ಸಲ್ಲಸುತ್ತೀರುವುದು ಗಮನಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ–2020ರ ವ್ಯವಸ್ಥಿತ ಅನುಷ್ಠಾನ ಹಾಗೂ ಧ್ಯೇಯೊದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಹಾಗೂ ಪಾಲಿಕೆಯ ಪ್ರಾಥಮಿಕ ಜವಾಬ್ದಾರಿಯಾದ ಘನತ್ಯಾಜ್ಯದ ವೈಜ್ಞಾನಿಕ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಯನ್ನು ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016 ಮತ್ತು ಬಿಬಿಎಂಪಿ ಬೈಲಾ–2021ಗಳನ್ವಯ ಅಚ್ಚುಕಟ್ಟಾಗಿ ನಿರ್ವಹಿಸಲು ಘನತ್ಯಾಜ್ಯ ನಿರ್ವಹಣಾ ಕೋಶಕ್ಕೆ ಸಂಬಂಧಿಸಿದ ಈ ಕೆಳಕಂಡ ವಿಷಯಗಳ ಕುರಿತು ವಲಯಗಳ ಹಂತಗಳಲ್ಲಿಯೇ ಮತ್ತು ವಲಯ ಆಯುಕ್ತರ ಮೂಲಕ ನಿರ್ಣಯ ಕೈಗೊಂಡು ಕ್ರಮಕೈಗೊಳ್ಳಲು ಈ ಮೂಲಕ ಆದೇಶಿಸಿದೆ.



ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner

ರಸ್ತೆ ಕಸ ಗುಡಿಸುವಿಕೆ/ಸಾರ್ವಜನಿಕ ಅಥವಾ ಸಮುದಾಯ ಶೌಚಾಲಯ/ಪೌರಕಾರ್ಮಿಕರ ಕಲ್ಯಾಣ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರ ಪ್ರತ್ಯಾಯೋಜನೆ:

| ಕ್ರ.ಸಂಖ್ಯೆ | ವಿಷಯ | ವಿವರಣೆ | ನಿರ್ಣಯ ಕೈಗೊಳ್ಳಬೇಕಾದ ಅಧಿಕಾರಿಯ ಪದನಾಮ |
|---|---|---|---|
| 1 | ರಸ್ತೆ ಕಸ ಗುಡಿಸುವಿಕೆಗೆ ಮತ್ತು ಸಾರ್ವಜನಿಕ ಅಥವಾ ಸಮುದಾಯ ಶೌಚಾಲಯಗಳಿಗೆ ಸಂಬಂಧಿಸಿದ ವಿಷಯಗಳು | ಪಾಲಿಕೆಯ ವ್ಯಾಪ್ತಿಯಲ್ಲಿನ ಎಂಟು ವಲಯಗಳಲ್ಲಿ ರಸ್ತೆ ಕಸ ಗುಡಿಸುವಿಕೆಯನ್ನು ಪೌರಕಾರ್ಮಿಕರ ಮುಖಾಂತರ ಕೈಗೊಳ್ಳಲಾಗುತ್ತಿದ್ದು, ಪೌರಕಾರ್ಮಿಕ ಸೂಪರ್‌ವೈಸರ್/ಕಿರಿಯ ಆರೋಗ್ಯ ಪರಿವೀಕ್ಷಕರು ಅಥವಾ ಘನತ್ಯಾಜ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನಿ)/ಅಧೀಕ್ಷಕ ಅಭಿಯಂತರರು/ಜಂಟಿ ಆಯುಕ್ತರು ಉಸ್ತುವಾರಿಯನ್ನು ವಹಿಸಿರುತ್ತಾರೆ. | ವಲಯ ಆಯುಕ್ತರು |
| 2 | ನೇರ ವೇತನ ಪೌರಕಾರ್ಮಿಕರ ಕಲ್ಯಾಣ ವಿಷಯಗಳು(ನಿವೃತ್ತಿ ಪರಿಹಾರ/ಮರಣ ಪರಿಹಾರ/ಅಂತರ-ವಿಭಾಗೀಯ ವರ್ಗಾವಣೆ/ಪದೋನ್ನತಿ(ಸೂಪರವೈಸರ್)/ ವೈದ್ಯಕೀಯ ಪರಿಹಾರ/ವೇತನ ಪಾವತಿ ಇತ್ಯಾದಿ) | ನೇರ ವೇತನ ಪೌರಕಾರ್ಮಿಕರು ವಲಯಗಳ ಪೌರಕಾರ್ಮಿಕ ಸೂಪರ್‌ವೈಸರ್/ಕಿರಿಯ ಆರೋಗ್ಯ ಪರಿವೀಕ್ಷಕರು ಅಥವಾ ಘನತ್ಯಾಜ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನಿ)/ಅಧೀಕ್ಷಕ ಅಭಿಯಂತರರು/ಜಂಟಿ ಆಯುಕ್ತರು ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ವಲಯ ಆಯುಕ್ತರು |

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner

| | | | |
|---|---|---|---|
| 3 | ನೇರ ವೇತನ ಪೌರಕಾರ್ಮಿಕರ ಅಂತರ ವಲಯ ವರ್ಗಾವಣೆ | ಕೇಂದ್ರ ಕಛೇರಿಯಿಂದ ಮಾನ್ಯ ಮುಖ್ಯ ಆಯುಕ್ತರ ಅನುಮೋದನೆಯೊಂದಿಗೆ ಕ್ರಮಕೈಗೊಳ್ಳಲಾಗುತ್ತಿತ್ತು. ಇನ್ನು ಮುಂದೆ, ಗಂಭೀರ ಆರೋಗ್ಯ ಸಮಸ್ಯೆ/ಕಾರ್ಯ ಸ್ಥಳದಿಂದ ವಾಸ ಸ್ಥಳ ದೂರವಿರುವವಿರುವ ಸಂದರ್ಭಗಳಲ್ಲಿ ಮಾತ್ರ, ಕಾರ್ಯ ಸ್ಥಾನ ವಲಯದ ಆಯುಕ್ತರು ಮತ್ತು ವರ್ಗಾವಣೆ ಕೋರಿರುವ ವಲಯದ ಆಯುಕ್ತರ ಸಹಮತ ಮತ್ತು ಅನುಮೋದನೆಯೊಂದಿಗೆ ಕ್ರಮ ಕೈಗೊಳ್ಳುವುದು. | ವಲಯ ಆಯುಕ್ತರು |
| 4 | ನೂತನ ಮೈಕ್ರೋಪ್ಲಾನ್ ಮತ್ತು ರಸ್ತೆ ಮ್ಯಾಪಿಂಗ್ ಅನುಗುಣವಾಗಿ ಹೊಸದಾಗಿ **ಒಂದು ವರ್ಷಕ್ಕಿಂತ ಕಡಿಮೆ ಸೇವೆಯ (ಈ ಹಿಂದಿನ ಕೇಂದ್ರ ಕಛೇರಿಯ 2,820 ನೇರ ವೇತನ ಪೌರಕಾರ್ಮಿಕರ ಪಟ್ಟಿಯಿಂದ ವಲಯವಾರು)** ನೇರ ವೇತನ ಪೌರಕಾರ್ಮಿಕರನ್ನು ನಿಯೋಜಿಸಿಕೊಳ್ಳುವ ಕುರಿತು. | ಇಲ್ಲಿಯವರೆವಿಗೂ, ಮೈಕ್ರೋಪ್ಲಾನ್ ಮತ್ತು ರಸ್ತೆ ಮ್ಯಾಪಿಂಗ್ ಅನುಗುಣವಾಗಿ ನೇರ ವೇತನ ಪೌರಕಾರ್ಮಿಕರನ್ನು ಜಂಟಿ ಆಯುಕ್ತರು(ಘನಿ)ರವರ ನೇತೃತ್ವದ ಜಿಪಿಪಿಎಸ್ ಸಮಿತಿಯ ಅನುಮೋದನೆಯೊಂದಿಗೆ ನಿಯೋಜಿಸಿಕೊಳ್ಳಲಾಗುತ್ತಿತ್ತು. | ವಲಯ ಆಯುಕ್ತರು |
| 5 | ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯದ ವೈಜ್ಞಾನಿಕ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಯ ಉಸ್ತುವಾರಿ ಮತ್ತು ಬಿಲ್‌ಗಳ ಪಾವತಿ | ಸದರಿ ಕಾರ್ಯವು ಕಿರಿಯ ಆರೋಗ್ಯ ಪರಿವೀಕ್ಷಕರು ಅಥವಾ ಘನತ್ಯಾಜ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನಿ)/ಅಧೀಕ್ಷಕ ಅಭಿಯಂತರರುರವರ ಉಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತಿರುತ್ತದೆ. | ವಲಯ ಆಯುಕ್ತರು |

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner

| | | | |
|---|---|---|---|
| 6 | ಪಾಲಿಕೆಯ ವ್ಯಾಪ್ತಿಯಲ್ಲಿನ ಕಾರ್ಯಗಳ/ ತ್ಯಾಜ್ಯ ನಿರ್ವಹಣೆಯ ಬಾಕಿ ಬಿಲ್‌ಗಳ ಪಾವತಿ | ಈ ಹಿಂದಿನ ಪಾವತಿಗಾಗಿ ಬಾಕಿಯಿರುವ ಎಲ್ಲಾ ಬಿಲ್‌ಗಳ ಪಾವತಿ/ವಿಲೇವಾರಿ | ವಲಯ ಆಯುಕ್ತರು |
| 7 | ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಚಾಲನೆ/ನಿರ್ವಹಣೆ | ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು ಜಂಟಿ ಆಯುಕ್ತರುರವರ ಮೂಲಕ ಅನುಷ್ಠಾನಗೊಳಿಸಿ ನಿರ್ವಹಿಸಲಾಗುತ್ತಿದೆ. | ಆಡಳಿತಾತ್ಮಕ ತೀರ್ಮಾನಕ್ಕಾಗಿ ಮಾತ್ರ ವಲಯ ಆಯುಕ್ತರು |

1. ಈ ಮೇಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ವಲಯಗಳ ವಲಯ ಆಯುಕ್ತರು/ಜಂಟಿ ಆಯುಕ್ತರು/ಅಧೀಕ್ಷಕ ಅಭೀಯಂತರರು/ಸ.ಕಾ.ಅ(ಘನಿ)ರವರುಗಳಿಗೆ ಈ ಮೂಲಕ ಸೂಚಿಸಿದೆ.
2. ಅವಶ್ಯಕವೆನಿಸಿದ್ದಲ್ಲಿ, ವಲಯ ಆಯುಕ್ತರುರವರು ವಲಯ ಜಂಟಿ ಆಯುಕ್ತರುರವರಿಗೆ ತಮ್ಮ ಆಯ್ದ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು. ಆದರೆ, ಅಂತಿಮ ತೀರ್ಮಾನವು ವಲಯ ಆಯುಕ್ತರುರವರ ಅನುಮೋದನೆಗೆ ಒಳಪಟ್ಟಿರುತ್ತದೆ.
3. ಕೇಂದ್ರ ಕಛೇರಿಯ ಜಂಟಿ ಆಯುಕ್ತರು(ಘನಿ)ರವರು ಒಟ್ಟಾರೆ ನಗರದ ಸ್ವಚ್ಛತೆಯನ್ನು ಕಾಪಾಡಲು, ಪೌರಕಾರ್ಮಿಕರ ಮತ್ತು ರಸ್ತೆ ಕಸ ಗುಡಿಸುವಿಕೆ/ಕಪ್ಪು ಚುಕ್ಕೆಗಳ(Blackspots)/ ಡೆಬ್ರಿಸ್‌ಗಳ ನಿರ್ವಹಣೆಯ ನೀತಿ ನಿಯಮಗಳನ್ನು ರೂಪಿಸುವ ಜವಾಬ್ದಾರಿಯನ್ನು ಮತ್ತು ಒಟ್ಟಾರೆ ಮೇಲುಸ್ತುವಾರಿಯನ್ನು ವಹಿಸುವುದು.
4. **ಘನತ್ಯಾಜ್ಯ ನಿರ್ವಹಣೆಯ ನೀತಿ ನಿಯಮಗಳನ್ನು ರೂಪಿಸುವ ಅಥವಾ ಈ ಕುರಿತು ನಿರ್ಣಯಿಸುವ ಕಡತಗಳನ್ನು ಮಾತ್ರ ಮುಖ್ಯ ಆಯುಕ್ತರ ಕಛೇರಿಗೆ ಸಲ್ಲಿಸುವುದೆಂದು** ಈ ಮೂಲಕ ತಿಳಿಸಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರಪಾಲಿಕೆ

ಪ್ರತಿಯನ್ನು:
1. ಮಾನ್ಯ ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
2. ವಿಶೇಷ ಆಯುಕ್ತರು(ಘನಿ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
3. ವಿಶೇಷ ಆಯುಕ್ತರು(ಹಣಕಾಸು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.



Scanned with CamScanner

4. ವಿಶೇಷ ಆಯುಕ್ತರು(ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
5. ವಿಶೇಷ ಆಯುಕ್ತರು(ಕಲ್ಯಾಣ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
6. ವಿಶೇಷ ಆಯುಕ್ತರು(ಆರೋಗ್ಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
7. ವಲಯ ಆಯುಕ್ತರು, ಎಲ್ಲಾ ವಲಯಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
8. ಜಂಟಿ ಆಯುಕ್ತರು, ಎಲ್ಲಾ ವಲಯಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
9. ಅಧೀಕ್ಷಕ ಅಭಿಯಂತರರು, ಎಲ್ಲಾ ವಲಯಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
10. ಸ.ಕಾ.ಅ(ಘನಿ), ಎಲ್ಲಾ ವಿಭಾಗಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
11. ಕಛೇರಿ ಪ್ರತಿ.



Scanned with CamScanner